**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ.**

**ಸಿ.ಸಿ. ಸಂಖ್ಯೆ:148/2022**

ಚಾಸಾ: 4     ಪ್ರಾಸಾ:3

| | | |
|---|---|---|
| ಹೆಸರು | : | ಡಾ. ಅನಘ |
| ಗಂಡನ/ತಂದೆಯ ಹೆಸರು | : | ಚರಣ್ ಕುಮಾರ್ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ವೈದ್ಯಾಧಿಕಾರಿ , ಪ್ರಾಥಮಿಕ ಆರೋಗ್ಯ ಕೇಂದ್ರ ಬಿಡದಿ, |
| ವಾಸ | : | ಬೆಂಗಳೂರು |

**ದಿನಾಂಕ 30.07.2026 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ: ಮಾನ್ಯ ಎಪಿಪಿ ಯವರಿಂದ:**

ನಾನು 17.06.2021 ರಿಂದ 21.08.2022 ರವರೆಗೆ ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ CMO ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 01.09.2021 ರಂದು ಮಧ್ಯಾಹ್ನ 12.15 ಗಂಟೆಗೆ ಚಾಸಾ1 ರವರು ಹಲ್ಲೆಯ ಹಿನ್ನಲೆಯಲ್ಲಿ ಗಾಯಗೊಂಡು ಚಿಕಿತ್ಸೆಗಾಗಿ ಬಂದಿದ್ದರು. ಆಗ ನಾನು ಅಲ್ಲಿ CMO ಆಗಿ ಕರ್ತವ್ಯ ನಿರ್ವಹಿಸಿದ್ದೆ. ನಾನು ಅವರನ್ನು ಗಾಯದ ವಿಚಾರವಾಗಿ ಕೇಳಿದಾಗ ಚಂದ್ರಶೇಖರ್ ಎನ್ನುವವರು ನನಗೆ ಮಚ್ಚಿನಿಂದ ಸುಮಾರು ಮಧ್ಯಾಹ್ನ 1.00 ಗಂಟೆಯ ಸಮಯದಲ್ಲಿ ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆಂದು ನುಡಿದಿರುತ್ತಾರೆ. ನಾನು ಅವರನ್ನು ಪರೀಕ್ಷಿಸಿದಾಗ

ಈ ಕೆಳಕಂಡ ಗಾಯ ಆಗಿರುತ್ತವೆ.

1. ತಲೆಯ ಹಿಂಭಾಗದಲ್ಲಿ 4 x 1 ಸೆಂ. ಮೀ ಹರಿತ ಗಾಯ ಕಂಡು ಬಂದಿರುತ್ತದೆ.

ಸದರಿ ಗಾಯಗಳಿಗೆ ಚಿಕಿತ್ಸೆಯನ್ನು ನೀಡಿರುತ್ತೇನೆ.ನನ್ನ ಅಭಿಪ್ರಾಯದ ಪ್ರಕಾರ ಈ ಮೇಲ್ಕಂಡ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಆಗಿರುತ್ತದೆ. ಈ ಸಂಬಂದ ನಾನು ಎಂ ಕೆ ದೊಡ್ಡಿ ಪೋಲಿಸ್ ರವರ ಕೋರಿಕೆಯ

ಮೇರೆಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ಸದರಿ ಗಾಯದ ಪ್ರಮಾಣ ಪತ್ರವನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ನಿಪಿ-4 ರಲ್ಲಿ ನಮೂದಿಸಿರುವ ಗಾಯ ಕಬ್ಬಿಣದ ಕುಡುಗೋಲಿನಿಂದ ಅಂದರೆ ಮು ಮಾ 1 ರಿಂದ ಹೊಡೆದಾಗ ಆಗುವ ಸಂಭವ ಇದೆ ಎಂದರೆ ನಿಜ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್ ಎಸ್ ಹೆಚ್ ವಕೀಲರಿಂದಃ</u>**

ನಿಪಿ-4 ರಲ್ಲಿ ಗಾಯದ ವಯಸ್ಸನ್ನು ನಮೂದಿಸಿಲ್ಲ. ನನ್ನ ಮುಂದೆ ಈ ಕೇಸಿನ ತನಿಖಾಧಿಕಾರಿಯವರು ಕುಡುಗೋಲನ್ನು ತಂದು ಹಾಜರು ಪಡಿಸಿಲ್ಲ. ಒಬ್ಬ ವ್ಯಕ್ತಿ ಗಟ್ಟಿಯಾದ ನೆಲದಲ್ಲಿ ನಡೆದುಕೊಂಡು ಹೋಗುವಾಗ ಜಾರಿ ಬಿದ್ದಾಗ ನೆಲದ ಮೇಲೆ ಗಾಜಿನ ಚೂರು ಇದ್ದಾಗ ಮೇಲೆ ಹೇಳಿದ ಗಾಯಗಳು ಆಗುವ ಸಾದ್ಯತೆ ಇದೆ ಎಂದರೆ ನಿಜ.

**<u>ಮರುವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**